# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ: 08-08-2022 ರಂದು ಸಿ.ವಿ.ರಾಮನ್‌ನಗರ ಉಪ ವಿಭಾಗ,

## ವಾರ್ಡ್ ಸಂಖ್ಯೆ:118, ಲಾಲ್‌ಬಹದ್ದೂರ್‌ನಗರ ವಾರ್ಡ್ ಸಮಿತಿ ಸಭೆಯ ನಡಾವಳಿಗಳು

ದಿನಾಂಕ: 08-08-2022 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ಸಂಖ್ಯೆ:118 (ಹಳೇ ವಾರ್ಡ್ ಸಂಖ್ಯೆ 50), ಲಾಲ್‌ಬಹದ್ದೂರ್‌ನಗರ ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ನೋಡೆಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ವಾರ್ಡ್ ಸಂಖ್ಯೆ:118 (ಹಳೇ ವಾರ್ಡ್ ಸಂಖ್ಯೆ 50), ಲಾಲ್‌ಬಹದ್ದೂರ್‌ನಗರ ವಾರ್ಡ್ ಕಛೇರಿ, 2ನೇ ಮುಖ್ಯರಸ್ತೆ, ಕಸ್ತೂರಿನಗರ ಬೆಂಗಳೂರು-560043 ಇಲ್ಲಿ ಹಮ್ಮಿಕೊಳ್ಳಲಾಯಿತು. ಸದರಿ ಸಭೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು ಈ ಕೆಳಕಂಡಂತೆ ಇರುತ್ತದೆ.

**ಸಭೆಯಲ್ಲಿ ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು ಹಾಗೂ ಆರ್.ಡಬ್ಲ್ಯೂ.ಎ**

1. ಶ್ರೀ.ರಮೇಶ್.ಎನ್ ಸದಸ್ಯರು
2. ಶ್ರೀ.ನಂಜೇಗೌಡ ಸದಸ್ಯರು
3. ಶ್ರೀ.ನಂದಗೋಪಾಲ್ ಸದಸ್ಯರು
4. ಶ್ರೀ.ವಿ.ಎಂ.ರಾಜಣ್ಣ ಸದಸ್ಯರು
5. ಶ್ರೀ.ರಮಾನಥ್ ರಾವ್ ಆರ್.ಡಬ್ಲ್ಯೂ.ಎ
6. ಶ್ರೀ.ಮುನಿಕೃಷ್ಣ ಸದಸ್ಯರು
7. ಶ್ರೀ.ವೆಂಕಟೇಶ್ ಸದಸ್ಯರು

**ಸಭೆಯಲ್ಲಿ ಹಾಜರಿದ್ದ ವಾರ್ಡ್ ಮಟ್ಟದ ಅಧಿಕಾರಿ/ನೌಕರರು**

1. ಡಾ॥ನಯನ ತಾರಾ ಪಾಟೀಲ್, ನೋಡೆಲ್ ಅಧಿಕಾರಿ ವಾರ್ಡ್ ಸಂಖ್ಯೆ:118 (ಹಳೇ ವಾರ್ಡ್ ಸಂಖ್ಯೆ 50), ಲಾಲ್‌ಬಹದ್ದೂರ್‌ನಗರ
2. ಶ್ರೀ.ನರಸಿಂಹಯ್ಯ.ಎನ್, ಸಹಾಯಕ ಅಭಿಯಂತರರು ಹಾಗೂ ವಾರ್ಡ್ ಸಮಿತಿ ಕಾರ್ಯದರ್ಶಿ ವಾರ್ಡ್ ಸಂಖ್ಯೆ:118, ಲಾಲ್‌ಬಹದ್ದೂರ್‌ನಗರ
3. ಶ್ರೀ.ಸಂತೋಷ್ ಕೆಲಸ ಪರಿವೀಕ್ಷಕರು ಬೆಸ್ಕಾಂ
4. ಡಾ॥ಅಶೋಕ್, ಹಳೇ ಬೈಯ್ಯಪ್ಪನಹಳ್ಳಿ ವೈದ್ಯರು
5. ಶ್ರೀ.ಅಜಿತ್ ಹಿರಿಯ ಆರೋಗ್ಯ ಪರಿವೀಕ್ಷಕರು

ಕಾರ್ಯದರ್ಶಿಗಳು ಸಭೆಗೆ ಆಗಮಿಸಿರುವ ವಾರ್ಡ್ ಸಮಿತಿ ಸಭೆಯ ಅಧ್ಯಕ್ಷರಿಗೆ, ಸದಸ್ಯರಿಗೆ ಹಾಗೂ ವಿವಿಧ ಇಲಾಖೆಯ ಅಧಿಕಾರಿ/ನೌಕರರುಗಳಿಗೆ ಹಾಗೂ ಸಾರ್ವಜನಿಕರಿಗೆ ಸ್ವಾಗತ ಕೋರಿದರು. ಹಾಗೂ ಹಿಂದಿನ ಸಭೆಯಲ್ಲಿ ಚರ್ಚಿಸಲಾಗಿರುವ ವಿಷಯಗಳ ಬಗ್ಗೆ ಹಾಗೂ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಸಭೆಯಲ್ಲಿ ಮಂಡಿಸಲು ಮಾನ್ಯ ಅಧ್ಯಕ್ಷರು ತಿಳಿಸಿ, ಸಭೆಯನ್ನು ಪ್ರಾರಂಭಿಸಲಾಯಿತು.

**ಸಭೆಯಲ್ಲಿ ಚರ್ಚಿಸಿದ ವಿಷಯಗಳು:-**

| ಕ್ರ. ಸಂ | ಮಾಹಿತಿ | ಕ್ರಮ ವಹಿಸಬೇಕಾಗಿರುವ ಅಧಿಕಾರಿ |
|---|---|---|
| | **ಕಾಮಗಾರಿ ಇಲಾಖೆ (Engineering)** | |
| 1 | • ಚನ್ನಸಂದ್ರ ಗ್ರಾಮಕ್ಕೆ ಹೊಂದಿಕೊಂಡು ಬಿ.ಡಿ.ಎ ಬಡಾವಣೆಯಲ್ಲಿ ಚರಂಡಿಗಳಲ್ಲಿ ಹೂಳನ್ನು ತೆರಗೆಯಲು ಕೋರಿದರು.<br>• ಶ್ರೀ.ಮುಕುಂದ್ ರವರು ಕೃಷ್ಣಯ್ಯನಪಾಳ್ಯ ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚಲು ತಿಳಿಸಿದರು. ಸಹಾಯಕ ಅಭಿಯಂತರರು ಮಾತನಾರಿ ರಸ್ತೆ ಗುಂಡಿಗಳನ್ನು ಮುಚ್ಚಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. | **Assistant Engineer-BBMP** |

| | | |
|---|---|---|
| | ಎಂದು ತಿಳಿಸಿದರು. | |
| | **ಬೆಂಗಳೂರು ಜಲ ಮಂಡಳಿ (BWSSB)** | |
| 1 | • ಪಿಲ್ಲಾರೆಡ್ಡಿನಗರದಲ್ಲಿ ಸ್ಯಾನಿಟರಿ ಪೈಪ್ಸ್‌ಗಳನ್ನು ಪೈಪ್‌ಗಳು ದುರಸ್ಥಿ ಮಾಡಲು ಕೋರಿದರು. | Assistant Engineer-BWSSB |
| | **ಬೀದಿ ದೀಪಗಳು (STREET LIGHTS)** | |
| 1 | ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂದು ಸಭೆಯಲ್ಲಿ ದೂರು ನೀಡಲಾಯಿತು. ಇದಕ್ಕೆ ಗುತ್ತಿಗೆದಾರರ ಪರವಾಗಿ ಶ್ರೀ.ಸಂತೋಷ್‌ರವರು ದುರಸ್ಥಿಯಲ್ಲಿರುವ ಬೀದಿ ದೀಪಗಳನ್ನು ಸರಿಪಡಿಸಲಾಗುವುದ ಎಂದು ತಿಳಿಸಿದರು. | ಸಹಾಯಕ ಅಭಿಯಂತರರು ಬೆಸ್ಕಾಂ |
| | **ತೋಟಗಾರಿಕಾ ಇಲಾಖೆ** | |
| 1 | ವಾರ್ಡ್ ವ್ಯಾಪ್ತಿಯಲ್ಲಿ ಪರಿಸರ ಸಂರಕ್ಷಣೆ ಮಾಡಲು ಗಿಡಗಳನ್ನು ನಡೆಲು . ಕೋರಿದರು. | ತೋಟಗಾರಿಕಾ ಅಧೀಕ್ಷಕರು |
| | **ಅರಣ್ಯ ಇಲಾಖೆ** | |
| 1 | ಸದಾನಂದನಗರ 2ನೇ ಅಡ್ಡರಸ್ತೆ ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಒಣಗಿರುವ ಹಾಗೂ ಬೀಳುವ ಹಂತದಲ್ಲಿರುವ ಮರಗಳನ್ನು ತೆರವುಗೊಳಿಸಲು ಶ್ರೀ.ರಾಜಣ್ಣ ಸದಸ್ಯರು ಕೋರಿದರು. ಅದರಂತೆ ಸಂಬಂಧಪಟ್ಟವರಿಗೆ ಪತ್ರ ಬರೆಯಲಾಗಿರುತ್ತದೆ. | ವಲಯ ಅರಣ್ಯ ಅಧಿಕಾರಿಗಳು |
| | **ಸಂಚಾರ ಪೊಲೀಸ್ ಇಲಾಖೆ TRAFIC POLICE DEPARTMENT** | |
| 1 | • ಕಸ್ತೂರಿನಗರ 2ನೇ 'ಎ' ಮುಖ್ಯರಸ್ತೆ, ನ್ಯೂ ಹರಿಜನ್ ಕಾಲೇಜು ಮತ್ತು ಓ.ಎಂ.ಬಿ.ಆರ್ ಲೇಔಟ್‌ನಲ್ಲಿರುವ ಸಿ.ಎಂ.ಆರ್ ಕಾಲೇಜು ಬಳಿ ಅನಧಿಕೃತವಾಗಿ ವಾಹನಗಳನ್ನು ನಿಲ್ಲಿಸುತ್ತಿರುವುದನ್ನು ತಡೆಗಟ್ಟಲು ಹಾಗೂ ಸಂಚಾರ ದಟ್ಟಣೆಯನ್ನು ತಡೆಗಟ್ಟಲು ಸೂಚಿಸಲಾಯಿತು. | |
| | **ಪೊಲೀಸ್ ಇಲಾಖೆ (ಕಾ ಮತ್ತು ಸು)** | |
| 1 | ವಾರ್ಡ್ ವ್ಯಾಪ್ತಿಯಲ್ಲಿ ಕಾಲೇಜುಗಳ ಸುತ್ತ-ಮುತ್ತ ಗಸ್ತು ನಡೆಸಲು ಕ್ರಮ ವಹಿಸಲು ಕೋರಿರುತ್ತಾರೆ. | Police Departmrnt |
| | **ಪೊಲೀಸ್ ಇಲಾಖೆ (ಟ್ರಾಫಿಕ್)** | |
| 1 | ವಾರ್ಡ್ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಶಾಲಾ-ಕಾಲೇಜುಗಳ ಸುತ್ತ-ಮುತ್ತ ವಾಹನ ನಿಲುಗಡೆಯನ್ನು ನಿಲ್ಲಿಸದಂತೆ ನಿಯಂತ್ರಿಸಲು ಕೋರಿದರು. | Police Departmrnt |

ಪ್ರಸ್ತುತ ಸಭೆಗೆ ಗೈರು ಹಾಜರಾಗಿರುವವರ ವಿರುದ್ಧ ನೋಟೀಸು ಜಾರಿ ಮಾಡಿ, ಮುಂದಿನ ಸಭೆಗೆ ಕಡ್ಡಾಯವಾಗಿ ನಿಗಧಿತ ಸಮಯದೊಳಗೆ ಹಾಜರಿರಲು ಹಾಗೂ ಮುಂದಿನ ಸಭೆಯ ಒಳಗಾಗಿ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮ ವಹಿಸಿ, ವಾರ್ಡ್ ಸಮಿತಿ ಕಾರ್ಯದರ್ಶಿರವರಿಗೆ ಅನುಪಾಲನಾ ವರದಿಯನ್ನು ಸಲ್ಲಿಸಲು ತಿಳಿಸಿ ಕಾರ್ಯದರ್ಶಿಗಳು ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ಕಾರ್ಯದರ್ಶಿಗಳು

ಶ್ರೀ.ನರಸಿಂಹಯ್ಯ.ಎಚ್
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ:118-ಲಾಲ್ ಬಹದ್ದೂರ್‌ನಗರ

ಅಧ್ಯಕ್ಷರು

ಡಾ॥ನಯನ ತಾರಾ ಪಾಟೀಲ್,
ಮತ್ತು ನೋಡೆಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ:118-ಲಾಲ್ ಬಹದ್ದೂರ್‌ನಗರ

ಪ್ರತಿಯನ್ನು:-

1. ಡಾ॥ನಯನ ತಾರಾ ಪಾಟೀಲ್, ನೋಡೆಲ್ ಅಧಿಕಾರಿಗಳು ವಾರ್ಡ್ ಸಂಖ್ಯೆ:118 ರವರ ಮಾಹಿತಿಗಾಗಿ ಕಳುಹಿಸಿದೆ.
2. ಕಾರ್ಯಪಾಲಕ ಅಭಿಯಂತರರು, ಸಿ.ವಿ.ರಾಮನ್‌ನಗರ ವಿಭಾಗ ರವರ ಮಾಹಿತಿಗಾಗಿ ಹಾಗೂ ಅನುಸರಣಾ ವರದಿಯನ್ನು ಸಲ್ಲಿಸಲು ಕಳುಹಿಸಿದೆ.
3. ಮಾನ್ಯ ತಹಶೀಲ್ದಾರ್, ಕೆ.ಆರ್.ಪುರಂ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸುತ್ತಾ ಹಾಗೂ ಅನುಸರಣಾ ವರದಿಯನ್ನು ಸಲ್ಲಿಸಲು ಕಳುಹಿಸಿದೆ.
4. ಅಧೀಕ್ಷಕರು, ತೋಟಗಾರಿಕೆ ಇಲಾಖೆ(ಪೂರ್ವ) ರವರ ಮಾಹಿತಿಗಾಗಿ ಹಾಗೂ ಅನುಸರಣಾ ವರದಿಯನ್ನು ಸಲ್ಲಿಸಲು ಕಳುಹಿಸಿದೆ.
5. ಆರೋಗ್ಯ ವೈಧ್ಯಾಧಿಕಾರಿಗಳು(ಸಿ.ವಿ.ರಾಮನ್‌ನಗರ) ವಿಭಾಗ ರವರ ಮಾಹಿತಿಗಾಗಿ ಹಾಗೂ ಅನುಸರಣಾ ವರದಿಯನ್ನು ಸಲ್ಲಿಸಲು ಕಳುಹಿಸಿದೆ.
6. ಆರಕ್ಷಕ ನಿರೀಕ್ಷಕರು, ಕಾನೂನು ಸುವ್ಯವಸ್ಥೆ, ಬೈಯ್ಯಪ್ಪನಹಳ್ಳಿ/ರಾಮೂರ್ತಿನಗರ/ಜೀವನ್‌ಭಿಮಾನಗರ/ಇಂದಿರಾನಗರ, ಪೋಲೀಸ್ ಠಾಣೆ ರವರ ಮಾಹಿತಿಗಾಗಿ ಹಾಗೂ ಅನುಸರಣಾ ವರದಿಯನ್ನು ಸಲ್ಲಿಸಲು ಕಳುಹಿಸಿದೆ.
7. ಆರಕ್ಷಕ ನಿರೀಕ್ಷಕರು(ಸಂಚಾರ ಪೋಲೀಸ್ ಠಾಣೆ) ಬಾಣಸವಾಡಿ/ರಾಮೂರ್ತಿನಗರ/ಜೀವನ್‌ಭಿಮಾನಗರ/ಇಂದಿರಾನಗರ, ಪೋಲೀಸ್ ಠಾಣೆ ರವರ ಮಾಹಿತಿಗಾಗಿ ಹಾಗೂ ಅನುಸರಣಾ ವರದಿಯನ್ನು ಸಲ್ಲಿಸಲು ಕಳುಹಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಿ.ವಿ.ರಾಮನ್‌ನಗರ ಉಪ ವಿಭಾಗ/ಕಾಮಗಾರಿ ಇಲಾಖೆ/ಘನತ್ಯಾಜ್ಯ ನಿರ್ವಹಣೆ/ವಿದ್ಯುತ್/ಬಿಡಬ್ಲ್ಯೂಎಸ್‌ಎಸ್‌ಬಿ/ಬೆಸ್ಕಾಂ/ಬೃಹತ್ ನೀರುಗಾಲುವೆ ರವರ ಮಾಹಿತಿಗಾಗಿ ಹಾಗೂ ಅನುಸರಣಾ ವರದಿಯನ್ನು ಸಲ್ಲಿಸಲು ಕಳುಹಿಸಿದೆ.
9. ಸಹಾಯಕ ಕಂದಾಯ ಅಧಿಕಾರಿ, ಸಿ.ವಿ.ರಾಮನ್‌ನಗರ ಉಪ ವಿಭಾಗ ರವರ ಮಾಹಿತಿಗಾಗಿ ಹಾಗೂ ಅನುಸರಣಾ ವರದಿಯನ್ನು ಸಲ್ಲಿಸಲು ಕಳುಹಿಸಿದೆ.
10. ಅರಣ್ಯಾಧಿಕಾರಿಗಳು, ಬಿ.ಬಿ.ಎಂ.ಪಿ ಅರಣ್ಯ ಇಲಾಖೆ, ಸಿ.ವಿ.ರಾಮನ್‌ನಗರ ವಿಭಾಗ ರವರ ಮಾಹಿತಿಗಾಗಿ ಹಾಗೂ ಅನುಸರಣಾ ವರದಿಯನ್ನು ಸಲ್ಲಿಸಲು ಕಳುಹಿಸಿದೆ.
11. ಕಂದಾಯ ಪರಿವೀಕ್ಷಕರು ಮತ್ತು ಕಂದಾಯ ವಸೂಲಿಗಾರರು, ವಾರ್ಡ್ ಸಂಖ್ಯೆ:118-ಲಾಲ್ ಬಹದ್ದೂರ್‌ನಗರ ರವರ ಮಾಹಿತಿಗಾಗಿ ಹಾಗೂ ಸಭೆಗೆ ಹಾಜರಾಗಲು ಕೋರಿದೆ
12. ವೈಧ್ಯಾಧಿಕಾರಿಗಳು, ನಗರ ಪ್ರಾಥಮಿಕ ಆರೋಗ್ಯ ಕೇಂದ್ರ, ಹಳೇ ಬೈಯ್ಯಪ್ಪನಹಳ್ಳಿ ವಾರ್ಡ್ ಸಂಖ್ಯೆ:118-ಲಾಲ್ ಬಹದ್ದೂರ್‌ನಗರ ರವರ ಮಾಹಿತಿಗಾಗಿ ಹಾಗೂ ಅನುಸರಣಾ ವರದಿಯನ್ನು ಸಲ್ಲಿಸಲು ಕಳುಹಿಸಿದೆ.
13. ಹಿರಿಯ ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ:118-ಲಾಲ್ ಬಹದ್ದೂರ್‌ನಗರ ರವರ ಮಾಹಿತಿಗಾಗಿ ಹಾಗೂ ಅನುಸರಣಾ ವರದಿಯನ್ನು ಸಲ್ಲಿಸಲು ಕಳುಹಿಸಿದೆ.
14. ಸ್ಥಳೀಯ ವಸತಿ ಕ್ಷೇಮಾಭಿವೃದ್ಧಿ ಸಂಘ(RWA) ರವರು ವಾರ್ಡ್ ಸಂಖ್ಯೆ:118-ಲಾಲ್ ಬಹದ್ದೂರ್‌ನಗರ ರವರ ಮಾಹಿತಿಗಾಗಿ ಹಾಗೂ ಹಾಗೂ ಅನುಸರಣಾ ವರದಿಯನ್ನು ಸಲ್ಲಿಸಲು ಕಳುಹಿಸಿದೆ.
15. ಕಛೇರಿ ಕಡತಕ್ಕೆ